ಹಕ್ಕಿಹಿಡಿವ ಬೇಟೆಗಾರನ ರೂಪಕದಲ್ಲಿ ವಿವರಿಸಿದನು. ಆದರೂ ಶರಣರು ಸಂಸ್ಕೃತ ಮತ್ತು ಅದರ ವಾಙ್ಮಯದೊಳಗಿದ್ದ ಜೀವಪರ ಚಿಂತನೆಗಳನ್ನು ಅಗತ್ಯಾನುಸಾರ ಸ್ವೀಕರಿಸಿದರು. 'ಸುದ್ಧಗನ್ನಡದೊಳ್ ತಂದಿಕ್ಕುವುದೇ ಸಕ್ಕದಮಂ?', 'ತಕ್ಕುದೇ ಬೆರೆಸಲ್ಕೆ ಘೃತಮುಂ ತೈಲಮುಮಂ?' ಎಂದು ತಕರಾರೆತ್ತಿದ; 'ಪೊಸಗನ್ನಡದಿಂ ವ್ಯಾವರ್ಣಿಸುವೆಂ' ಎಂದು ಘೋಷಿಸಿಕೊಂಡು 'ಮಿಸುಕದ ಸಕ್ಕದ' ಹೇರುವವರನ್ನು ಟೀಕಿಸುವ ನಯಸೇನನಾದರೂ, ಸಂಸ್ಕೃತವನ್ನು ಇಡಿಯಾಗಿ ಕೈಬಿಡಲಿಲ್ಲ. ಎರಡು ನುಡಿಗಳ ಬೆರಕೆಯ ಪರಿಯನ್ನು ಬಣ್ಣಿಸುವ ಅವನ ರೂಪಕದಲ್ಲಿ, ಸಂಸ್ಕೃತವು 'ತೈಲ'ವೆಂಬ ಸಂಸ್ಕೃತ ಶಬ್ದದ ಮೂಲಕ ಸೂಚಿತವಾಗಿದೆ. ಆದರೆ ಕನ್ನಡವು 'ತುಪ್ಪ'ಕ್ಕೆ ಬದಲು 'ಘೃತ'ವೆಂದು ಕರೆಯಲ್ಪಟ್ಟಿದೆ. ಇದು ಸಂಸ್ಕೃತ ಶಬ್ದಗಳ ಮೂಲಕವೇ ಕನ್ನಡಪರ ವಾದ ಮಂಡಿಸಬೇಕಾದ ಇಕ್ಕಟ್ಟನ್ನೂ ಕಾಣಿಸುವಂತಿದೆ.

ನಾಗವರ್ಮನು ಎರಡೂ ಭಾಷೆಗಳ ಹದಗೆಟ್ಟ ಬೆರಕೆಯನ್ನು 'ಮುತ್ತುಂ ಮೆಳಸುಂ ಕೋದಂತಿರೆ' ಎಂದು ಟೀಕಿಸುತ್ತಾನೆ. ಸಂಸ್ಕೃತ ಪಾಂಡಿತ್ಯ ಪ್ರದರ್ಶನದಲ್ಲಿ ಕಥೆಯ ಮೂಲಭಾವವು ಬದಿಗೆ ಸರಿವ ಮತ್ತು ಕನ್ನಡವನ್ನು ಜಡಗೊಳಿಸುವ ಆತಂಕ ಮುದ್ದಣನಿಗೂ ಇತ್ತು. ಇದನ್ನಾತ ನೀರಿಳಿಯದ ಗಂಟಲೊಳ್ ಕಡುಬು ತುರುಕುವ ರೂಪಕದಲ್ಲಿ ವಿವರಿಸಿದನು; ಇದಕ್ಕೆ ಪರಿಹಾರವಾಗಿ ಕನ್ನಡ–ಸಂಸ್ಕೃತಗಳ ಬೆರಕೆಯು, ಕರಿಮಣಿ ಸರದಲ್ಲಿ ಚೆಂಬವಳಂ ಕೋದಂತೆ ಇರಬೇಕೆಂದು ಸೂಚಿಸಿದನು. ಇಲ್ಲಿ ಕನ್ನಡವನ್ನು ಪ್ರತಿನಿಧಿಸುತ್ತಿರುವ ಕರಿಮಣಿ ಗಾಜಿನದು. ಅದರ ಬಣ್ಣ ಕಪ್ಪು. ಬೆಲೆ ಕಡಿಮೆ. ಆದರದು ಮಹತ್ವದ್ದು. ಅದರ ಪ್ರಾಮುಖ್ಯ–ಪಾವಿತ್ರ್ಯಗಳನ್ನು ಹೆಚ್ಚಿಸಲೆಂದು ಅದರೊಟ್ಟಿಗೆ ತುಟ್ಟಿಯಾದ ಕೆಂಪುಹವಳವನ್ನು ಪೋಣಿಸಲಾಗುತ್ತಿದೆ. ಘೃತ–ತೈಲ, ಮುತ್ತು–ಮೆಣಸು ಬೆರೆಸುವ ಚಿತ್ರಗಳಲ್ಲಿ ಕಲಬೆರಕೆಯ ಧ್ವನಿಯಿದ್ದರೆ, ಮುದ್ದಣನ ರೂಪಕದಲ್ಲಿ ಅರ್ಥಪೂರ್ಣ ಸಂಗಮದ ಉದ್ದೇಶವಿದೆ.

ಕನ್ನಡ ಚಹರೆಯ ಹುಡುಕಾಟದ ಮೇಲ್ಕಾಣಿಸಿದ ಯಾವ ವಾದಗಳೂ ಸಂಸ್ಕೃತದ ವಿರುದ್ಧವಾಗಿಲ್ಲ. ಬದಲಿಗೆ ಅದರ ಬೆರಕೆಯ ಪ್ರಮಾಣದ ಔಚಿತ್ಯಪ್ರಜ್ಞೆಗೆ ಸಂಬಂಧಿಸಿವೆ. ಈ ಔಚಿತ್ಯಪ್ರಜ್ಞೆಯು ಬೇರೆಬೇರೆ ಲೇಖಕರಲ್ಲಿ ಬದಲಾಗುತ್ತದೆ. ಒಬ್ಬರೇ ಲೇಖಕರ ವಿಭಿನ್ನ ಕೃತಿಗಳಲ್ಲೂ ವಿಭಿನ್ನವಾಗುತ್ತದೆ. ಕುವೆಂಪುರವರ ಕಾವ್ಯದಲ್ಲಿ ಕಾಣುವ ಬೆರಕೆ ಪ್ರಮಾಣವು, ಕಾದಂಬರಿಯ ಗದ್ಯದಲ್ಲಿಲ್ಲ. ಅವರ ಪ್ರಕೃತಿ ವರ್ಣನ ಕವನಗಳಲ್ಲಿರುವ ಸಂಸ್ಕೃತದ ಭಾರ, ಮಲೆನಾಡ ಗದ್ಯಚಿತ್ರಗಳಲ್ಲಿ ಕಾಣುವುದಿಲ್ಲ. ಬರಹದ ವಸ್ತು ಮತ್ತು ಉದ್ದೇಶವು ನುಡಿಯ ಚಹರೆಯನ್ನು ನಿರ್ಧರಿಸುತ್ತದೆ. ಕನ್ನಡದೊಳಗೆ ವಿಭಿನ್ನ ಭಾಷೆಗಳನ್ನು ಬೆರೆಸುವ ಪ್ರಶ್ನೆಯು, ಸಾಹಿತ್ಯತತ್ವಕ್ಕೂ ಲೇಖಕರ ಜೀವನದೃಷ್ಟಿಗೂ ಲಗತ್ತಾಗಿದೆ. ಪಂಪನ 'ದೇಸಿಯೊಳ್ ಪುಗುವುದು ಪೊಕ್ಕುಮಾರ್ಗದೊಳಗೆ ತಳ್ವುದು' ಘೋಷಣೆಯನ್ನು ಗಮನಿಸಬೇಕು. ಮಾರ್ಗವು ಸಂಸ್ಕೃತಗರ್ಭಿತ ಕನ್ನಡವನ್ನುಳ್ಳ, ದೊರೆಗಳೂ ದೇವತೆಗಳೂ ಮುನಿಗಳೂ ನಾಯಕರಾಗಿರುವ ಕಾವ್ಯಪದ್ಧತಿ. ಆದರೆ ಕನ್ನಡದ ಸಂಗವಿಲ್ಲದಿದ್ದರೆ ಅದು ಜಡಗೊಳ್ಳುತ್ತದೆ. ಅದಕ್ಕೆ ಜೀವಂತಿಕೆ ಒದಗುವುದೇ ದೇಸಿಯ ಸಂಗದಿಂದ. ಹೀಗಾಗಿಯೇ ಅದರ 'ಪುಗು'ವ ಬಾಗಿಲು ದೇಸಿಯಾಗಿದ್ದು, ಮಾರ್ಗವು ಕೂಡುವ ('ತಳ್ವ') ಬಿಂದುವಾಗಿದೆ. ಘೃತ–ತೈಲಗಳ ರೂಪಕಗಳಲ್ಲಿ ನಯಸೇನ ತೋರಲಾಗದ ಶಾಬ್ದಿಕ ಎಚ್ಚರವನ್ನು ಪಂಪ ದೇಸಿ–ಮಾರ್ಗ ಶಬ್ದಗಳಲ್ಲಿ ತೋರುತ್ತಾನೆ. ಇಲ್ಲಿ ಕನ್ನಡವನ್ನು ಪ್ರತಿನಿಧಿಸುತ್ತಿರುವ 'ದೇಸಿ'ಯು ಸಂಸ್ಕೃತ ಶಬ್ದವಲ್ಲ. ರೂಪಾಂತರಗೊಂಡ ತದ್ಭವ. ಕನ್ನಡಕ್ಕೆ ಉಪಯುಕ್ತ ಗುಣವನ್ನು ಗಳಿಸುವುದಕ್ಕಾಗಿ ಮತ್ತೊಂದರ ಸಂಗ ಬಯಸುವ ಮತ್ತು ರೂಪಾಂತರ ಪಡೆವ ವಿವೇಕವು ಮೂಡಿರುವುದು ಆತ್ಯಂತಿಕ ಹಟಗಳಲ್ಲಲ್ಲ; ಅರ್ಥಪೂರ್ಣ ಹಂಗಾಮುಗಳ ತಡಕಾಟಗಳಲ್ಲಿ. ಈ ಹಂಗಾಮಿನ ನೀತಿಯು ಕನ್ನಡವು ಉರ್ದು, ಫಾರಸಿ, ಇಂಗ್ಲಿಷುಗಳ ಜೊತೆ ಮಾಡಿರುವ ಭಾಷಿಕ–ಸಾಹಿತ್ಯಕ ನಂಟಿಗೂ ಅನ್ವಯವಾಗುವುದು. ಶ್ರೀಯವರು ಈ ನಂಟನ್ನು 'ಅವಳ ತೊಡುಗೆ ಇವಳಿಗಿಟ್ಟು ನೋಡಬಯಸಿದೆ, ಇವಳ ತೊಡಿಗೆ ಅವಳಿಗಿಟ್ಟು ಹಾಡಬಯಸಿದೆ' ರೂಪಕದಲ್ಲಿ ಬಣ್ಣಿಸಿದರು. ಇಲ್ಲಿ ಸೋದರಿಯರಾದ ಇಂಗ್ಲಿಷ್–ಕನ್ನಡ, ತಂತಮ್ಮ ಉಡುಗೆ ತೊಡುಗೆ ಬದಲಿಸಿಕೊಳ್ಳುತ್ತಿದ್ದಾರೆ. ಇಂತಹ